# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI






**ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003**

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ-10 Reg. No. : KARBIL/2005/16123 ಜನವರಿ - 2021 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ - 1 ಪ್ರಕಟಣೆ : 10-01-2021



● e-mail : jnanashakthisss@gmail.com ● whatsapp : 7795116598 ● Mobile : 9343361618

## ದಕ್ಷಿಣಾಮ್ನಾಯ ಶೃಂಗಗಿರಿ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಅನುಗ್ರಹ ಸಂದೇಶ

ಮನುಷ್ಯನ ಜೀವನವು ಅವನು ಅಂದುಕೊಂಡಂತೆಯೇ ಇರುತ್ತದೆ ಎಂದು ಯಾರೂ ಭರವಸೆಯನ್ನು ಕೊಡಲು ಆಗುವುದಿಲ್ಲ. ಭವಿಷ್ಯವು ಉತ್ತಮವಾಗಿ ಇರಲಿ ಎಂದು ಇಚ್ಛಿಸುವುದು ಒಳ್ಳೆಯದೇ ಆದರೂ, ಕೆಲವು ಸಂದರ್ಭಗಳು ಮನುಷ್ಯನ ಇಚ್ಛೆಗೆ ವಿರುದ್ಧವಾಗಿ ತೆರೆದುಕೊಳ್ಳಬಹುದು. ಆದ್ದರಿಂದ ಮನುಷ್ಯನು ತಾನು ಮಾಡುವ ಎಲ್ಲಾ ಕರ್ತವ್ಯಗಳನ್ನು ಭಗವಂತನಿಗೆ ಸಮರ್ಪಣಾ ಭಾವದಿಂದ ಅರ್ಪಿಸಬೇಕು.

"ನಾನು ನಿನ್ನ ಸೇವಕನಾಗಿರುತ್ತೇನೆ. ನಾನು ಆಚರಿಸುವ ಎಲ್ಲಾ ಕರ್ಮಗಳ ಫಲವೂ ನಿನಗೇ ಸೇರಿರುತ್ತದೆ" ಎಂಬ ಭಾವದಿಂದ ಮನುಷ್ಯನು ಕರ್ತವ್ಯ ನಿರತನಾಗಬೇಕು. ಈ ರೀತಿ ಇದ್ದರೆ, ಅವನ ಮನಸ್ಸು ಅತ್ಯಂತ ಸುಖವಾಗಲೀ, ಕಠೋರವಾದ ದುಃಖದ ಸಂದರ್ಭಗಳಲ್ಲಿಯೇ ಆಗಲೀ ವಿಚಲಿತಗೊಳ್ಳುವುದಿಲ್ಲ. ಎಂಥ ಸಂದರ್ಭಗಳಲ್ಲಿಯೂ ಅವನು ಸಮಾಧಾನಚಿತ್ತನಾಗಿ ಇರಲು ಶಕ್ತನಾಗುತ್ತಾನೆ.

ಲಾಭ-ಜಯ, ಸಂತೋಷ-ದುಃಖ, ಜನನ-ಮರಣ ಈ ಎಲ್ಲಾ ಸಂದರ್ಭಗಳಲ್ಲಿಯೂ ಸಮಾಧಾನಚಿತ್ತದಿಂದ ಇರುವುದು ಒಳ್ಳೆಯದು.

**ಸುಖಂ ಚ ದುಃಖಂ ಚ ಭವಾಭಾವೌ ಚ ಲಾಭಾಲಾಭೌ ಮರಣಂ ಜೀವಿತಂ ಚ ।**
**ಪರ್ಯಾಯಶಃ ಸರ್ವಮೇತೆ ಸ್ಪೃಶಂತಿ ತಸ್ಮಾದ್ಧೀರೋ ನೈವ ಹೃಷ್ಯೇನ್ನ ಶೋಚೇತ್ ॥**

ಈ ಪ್ರಪಂಚದಲ್ಲಿ ಯಾವುದೂ ಶಾಶ್ವತವಲ್ಲ. ಎಲ್ಲವೂ ಕನಸಿನಂತೆ ಇರುವುದು. ಈ ಸತ್ಯವನ್ನು ಅರಿತುಕೊಂಡರೆ ಅತ್ಯಂತ ನಿರಾಶೆಯಾಗಲೀ, ಆನಂದವಾಗಲೀ ಬಾಧಿಸುವುದಿಲ್ಲ.

*ಕೃಪೆ : 'ಶ್ರೀ ಶಂಕರ ಕೃಪಾ'*

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

**ಕೊಡಿಯಾಲ್‌ಬೈಲ್, ಮಂಗಳೂರು - 575 003**

### ಕಿರು ಪ್ರವಾಸ

ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ತಾರೀಕು **24-01-2021ನೇ** ರವಿವಾರದಂದು ಬೆಳಗ್ಗೆ **9-15ಕ್ಕೆ ವಾಮಂಜೂರು 'ಅಮ್ಚಿಘರ್'**ಗೆ ಕಿರುಪ್ರವಾಸ ಏರ್ಪಡಿಸಲಾಗಿದೆ.

**ಶುಲ್ಕ ಒಬ್ಬರಿಗೆ – ರೂ. 500/-**
**(ಊಟ, ಸಂಜೆ ಉಪಾಹಾರ ವ್ಯವಸ್ಥೆಗಳು ಸೇರಿ).**
**5 ವರ್ಷದ ಕೆಳಗಿನ ಮಕ್ಕಳಿಗೆ ಉಚಿತ.**

ನೀರಾಟ, ಈಜುಕೊಳ, ಒಳಾಂಗಣ, ಹೊರಾಂಗಣ ಆಟಗಳು ಸರ್ವರನ್ನು ಮುದಗೊಳಿಸಲಿದ್ದು ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ವಿನಂತಿ. ಮುಂದಾಗಿ ಹೆಸರು ನೋಂದಾಯಿಸಿ ವ್ಯವಸ್ಥೆಗಳಿಗಾಗಿ ಸಹಕರಿಸಿ.

**———— ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :————**

ಶ್ರೀಮತಿ ಕುಸುಮಾ ನವೀನ್ ಕುಮಾರ್ – 9480760904
ಶ್ರೀ ಮನೀಶ್ ರಾವ್ ಯು. – 9448726499

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

### 'ಸ್ಕೋಲರ್ಸ್ ಡೇ' - 2020

**ಭಾನುವಾರ, 17 ಜನವರಿ 2021**

**ಕಾರ್ಯಸೂಚಿ :**

ಬೆಳಗ್ಗೆ ಗಂಟೆ 8-30ರಿಂದ 10-15 : **ಉಪಾಹಾರ ಮತ್ತು ನೋಂದಾವಣೆ**
ಬೆಳಗ್ಗೆ ಗಂಟೆ 10-30ರಿಂದ 11-00 : **ಉದ್ಘಾಟನಾ ಕಾರ್ಯಕ್ರಮ ದೀಪ ಪ್ರಜ್ವಲನ**
ಸ್ವಾಗತ ಭಾಷಣ : **ಡಾ. ಎ. ಪಿ. ಕೃಷ್ಣ** ಅಧ್ಯಕ್ಷರ ಮಾತು : **ಶ್ರೀ ಹರ್ಷಕುಮಾರ್ ಕೇದಿಗೆ**

ಬೆಳಗ್ಗೆ ಗಂಟೆ 11-00ರಿಂದ 11-30 : **SESSION - I**
**Empowering Young India by Education**
**ವಿದ್ಯಾಭ್ಯಾಸದ ಮೂಲಕ ಭಾರತೀಯ ಯುವಜನತೆಯ ಸಬಲೀಕರಣ**
ಪ್ರೊ. (ಡಾ.) ಎಂ. ಎಸ್. ಮೂಡಿತ್ತಾಯ
ಉಪಕುಲಪತಿಗಳು, ನಿಟ್ಟೆ ವಿಶ್ವವಿದ್ಯಾಲಯ, ಮಂಗಳೂರು

ಬೆಳಗ್ಗೆ ಗಂಟೆ 11-30ರಿಂದ 12-00 : **SESSION - II**
**You and Your Life Pathway ahead**
**ನೀವು ಮತ್ತು ನಿಮ್ಮ ಜೀವನ – ಮುಂದಿನ ದಾರಿ**
**ಸಿಎ ಎಂ. ನರಸಿಂಹದಾಸ್ ಪೈ,** ಪ್ರಖ್ಯಾತ ಚಾರ್ಟರ್ಡ್ ಅಕೌಂಟೆಂಟ್, ಮಂಗಳೂರು

ಮಧ್ಯಾಹ್ನ ಗಂಟೆ 12-00ರಿಂದ 12-30 : **ಸಮೂಹ ಚರ್ಚೆ**
ಮಧ್ಯಾಹ್ನ ಗಂಟೆ 12-30ರಿಂದ 1-00 : **ವಿದ್ಯಾರ್ಥಿ ವೇತನ ವಿತರಣೆ**
ಮಧ್ಯಾಹ್ನ ಗಂಟೆ 1-00ರಿಂದ 2-00 : **ಭೋಜನ**

ವಿ. ಸೂ. : ❖ ಕಡ್ಡಾಯವಾಗಿ ಕೋವಿಡ್ 19 ಮಾನದಂಡವನ್ನು ಪಾಲಿಸತಕ್ಕದ್ದು.
❖ ಸ್ಕೋಲರ್‌ಶಿಪ್ ಪಡೆಯುವ ವಿದ್ಯಾರ್ಥಿಗಳು ಬೆಳಗ್ಗೆ 10–15 ಗಂಟೆಯ ಒಳಗೆ ತಮ್ಮ ಹೆಸರನ್ನು ಕೌಂಟರ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ತಡವಾಗಿ ಬಂದ ವಿದ್ಯಾರ್ಥಿಗಳಿಗೆ ಸ್ಕೋಲರ್‌ಶಿಪ್‌ನ್ನು ಕೊಡಲಾಗುವುದಿಲ್ಲ.



● ದಿನಕ್ಕೆ ಒಮ್ಮೆಯಾದರೂ ನಿಮ್ಮ ಜತೆ ನೀವೇ ಮಾತನಾಡಿಕೊಳ್ಳಿ. ಇಲ್ಲವಾದರೆ ಜಗತ್ತಿನ ಅತ್ಯುತ್ತಮ ವ್ಯಕ್ತಿಯೊಂದಿಗಿನ ಸಂಭಾಷಣೆ ಕಳೆದುಕೊಳ್ಳುತ್ತೀರಿ. – ಸ್ವಾಮಿ ವಿವೇಕಾನಂದ
● ಯಶಸ್ವಿಯಾಗುತ್ತೇನೆ ಎಂಬ ನಿರ್ಧಾರ ನಿಮ್ಮಲ್ಲಿ ಪ್ರಬಲವಾಗಿದ್ದರೆ ಸೋಲು ಎಂದಿಗೂ ನಿಮ್ಮನ್ನು ಹಿಮ್ಮೆಟ್ಟಿಸುವುದಿಲ್ಲ. – ಡಾ. ಎ.ಪಿ.ಜೆ. ಅಬ್ದುಲ್ ಕಲಾಂ

**ಜ್ಞಾನಶಕ್ತಿ ಮಾಸ ಪತ್ರಿಕೆ**

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್, ಪುತ್ತೂರು**
ಮೊಬೈಲ್ : 9448481696

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ, ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಸ್ವಾತಿ ಪ್ರಮೋದ್ ಕ್ಯಾದಿಗೆ**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ, ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು : **ಹರ್ಷಕುಮಾರ್ ಕೇದಿಗೆ**

## ಹೊಸ ವರುಷಕೆ ಶುಭ ಹಾರೈಕೆ

ಹೊಸ ವರುಷ ಬಂದಿದೆ ಎರಡು ಸಾವಿರದ ಇಪ್ಪತ್ತೊಂದು ।
ನಿಮಗೆ ತರಲಿ ಆರೋಗ್ಯವೆಂಬ ಸಂಪತ್ತು ನವಹರುಷ ತಂದು ।
ಅಳಿದು ಹೋಗಲಿ ಕೊರೋನಾ ಮಹಾಮಾರಿಯ
ಸಾವಿನ ಭಯದ ನೋವು ।
ಮರುಕಳಿಸಲಿ ಎಲ್ಲರ ಮನೆ ಮನದಲಿ ಸಂತಸದ ನಲಿವು ॥

ಧೈರ್ಯವಾಗಿ ಎದ್ದುನಿಲ್ಲಿ ಅಚಲ ಹಿಮಾಲಯಗಿರಿಯಂತೆ ।
ಕಷ್ಟವೆಂಬ ಬಿರುಗಾಳಿಯನು ಎದುರಿಸಿ ಧೈರ್ಯದಿ ಅಲುಗಾಡದಂತೆ ।
ಕಾರ್ಗತ್ತಲು ಕಳೆದಂತೆ ಇರುಳಾಗುವುದು ಸುಖವೆಂಬ ಹಗಲು ।
ಸೋತಿಂದು ಬರದು ಧೈರ್ಯದಿಂದ ಸದೃಢವಾಗಿ ನಿಂತಿರಲು ॥

ಬರದಿರಲಿ ಬದುಕಿನಲಿ ಎಂದೆಂದು ದುಗುಡ ದುಮ್ಮಾನಗಳು ।
ಮರೆತು ಹೋಗಲಿ ನೋವು ಮನವ ಕಾಡುವ ಬಾಧೆಗಳು ।
ಪ್ರಪಂಚದಿಂದ ತೊಲಗಲಿ ಕವಿದ
ಕೊರೋನಾ ಅಣುವಿನ ಅಂಜಿಕೆ ।
ಬರಲಿ ಮನೆಯಲ್ಲಿ ಕುಳಿತು ಹೈರಾಣಾದ ಜನರಿಗೆ ಚೇತರಿಕೆ ॥

ಇಪ್ಪತ್ತು ಇಪ್ಪತ್ತೊಂದರ ಹೊಸ ವರುಷದ ಶುಭದಿನಗಳಲಿ ।
ಪ್ರತಿದಿನವು ಸಾಧನೆಯ ಕನಸುಗಳು ಮನದಲ್ಲಿ ಮೂಡುತಿರಲಿ ।
ಕಾಣಬೇಕು ಎಲ್ಲರ ಮನಮೊಗದಲ್ಲಿ ಚೈತನ್ಯದ ಹೊಂಬೆಳಕನ್ನು ।
ಜಗದ ಜಂಜಡಗಳ ನಡುವೆ ಹತ್ತಬೇಕು
ಸಾಧನೆಯ ಮೆಟ್ಟಿಲನ್ನು ॥

ಬಂಧು–ಬಾಂಧವರ ಜೊತೆಗೊಂದಿಷ್ಟು
ಒಲವಿನ ಒಡನಾಟವಿರಲಿ ।
ಹಿರಿಯ ಕಿರಿಯರೊಡನೆ ಪ್ರೀತಿ ನಗು ಹರಟೆ ಸದಾ ಇರಲಿ ।
ಪುಟಿಯುವ ಕಾರಂಜಿಯಂತೆ ಉತ್ಸಾಹದಿ
ಚಿಮ್ಮುತಿರಬೇಕು ನೀವುಗಳು ।
ನಾ ಕೋರುವೆ ಹರುಷದಿ ನಿಮಗೆಲ್ಲರಿಗೂ
ಹೊಸ ವರುಷದ ಶುಭಾಶಯಗಳು ॥

– ಶ್ರೀಮತಿ ಮಂಜುಳಾ ಮುರಳೀಧರ್ ರಾವ್, ಮಂಗಳೂರು

# 'ಗ್ರೇಟ್ ಪ್ಲೇಸ್ ಟು ವರ್ಕ್' ಇನ್‌ಸ್ಟಿಟ್ಯೂಟ್‌ನಿಂದ ಲ್ಯಾಂಡ್ ಟ್ರೇಡ್ಸ್‌ಗೆ 'ಗ್ರೇಟ್ ಪ್ಲೇಸ್ ಟು ವರ್ಕ್' ಪ್ರಮಾಣೀಕರಣ

Land® Trades
BUILDERS & DEVELOPERS

ಉದ್ಯೋಗ ಸ್ಥಳಗಳಲ್ಲಿ ಉತ್ತಮ ವಿಶ್ವಾಸ, ಕಾರ್ಯಕ್ಷಮತೆಯ ಹಾಗೂ ಪರಿಪೂರ್ಣ ಸಂಸ್ಕೃತಿಯನ್ನು ನಿರ್ಮಿಸುವ, ಉಳಿಸಿಕೊಳ್ಳುವ ಸಂಸ್ಥೆಗಳನ್ನು ಗುರುತಿಸುವ ಹಾಗೂ ಗೌರವಿಸುವ **'ಗ್ರೇಟ್ ಪ್ಲೇಸ್ ಟು ವರ್ಕ್'** ಎಂಬ ಜಾಗತಿಕ ಸಂಸ್ಥೆಯಿಂದ **'ಗ್ರೇಟ್ ಪ್ಲೇಸ್ ಟು ವರ್ಕ್'** ಎಂಬ ಪ್ರಮಾಣೀಕರಣವನ್ನು ಮಂಗಳೂರಿನ ಪ್ರಮುಖ ರಿಯಲ್ ಎಸ್ಟೇಟ್ ಸಂಸ್ಥೆಯಾದ 'ಲ್ಯಾಂಡ್ ಟ್ರೇಡ್ಸ್ ಬಿಲ್ಡರ್ಸ್ ಮತ್ತು ಡೆವಲಪರ್ಸ್' ಇವರಿಗೆ ಈ ಗೌರವವನ್ನು ನೀಡಲಾಗಿದೆ. 'ಲ್ಯಾಂಡ್ ಟ್ರೇಡ್ಸ್' ಈ ಮಾನ್ಯತೆಯನ್ನು ಪಡೆದ ಭಾರತದ ನಾಲ್ಕು ಮೆಗಾ ರಿಯಲ್ ಎಸ್ಟೇಟ್ ಕಂಪೆನಿಗಳಲ್ಲಿ ಒಂದಾಗಿದೆ ಮತ್ತು ಕರಾವಳಿ ಕರ್ನಾಟಕದ ಮೊದಲನೆಯದಾಗಿದೆ. ಪ್ರತಿವರ್ಷ 60ಕ್ಕೂ ಹೆಚ್ಚು ದೇಶಗಳ 10,000ಕ್ಕೂ ಅಧಿಕ ಸಂಸ್ಥೆಗಳು ತಮ್ಮ ಉದ್ಯೋಗ ಸಂಸ್ಕೃತಿಯನ್ನು ಬಲಪಡಿಸಲು **'ಗ್ರೇಟ್ ಪ್ಲೇಸ್ ಟು ವರ್ಕ್'** ಸಂಸ್ಥೆಯ ಸಹಾಯವನ್ನು ಪಡೆದುಕೊಳ್ಳುತ್ತವೆ.

ಲ್ಯಾಂಡ್ ಟ್ರೇಡ್ಸ್ ತನ್ನ ಕಾರ್ಯಕ್ಷಮತೆ ನೌಕರರ ಕಲ್ಯಾಣ ಮತ್ತು ಗ್ರಾಹಕರ ತೃಪ್ತಿಯೊಂದಿಗೆ ನಿಕಟ ಸಂಬಂಧ ಹೊಂದಿದೆ ಎಂದು ಪರಿಗಣಿಸುತ್ತದೆ. "ಸಂಸ್ಥೆಯ ಯಶಸ್ಸಿಗೆ ಬೇಕಾದುದು ಸಂತೃಪ್ತ ಗ್ರಾಹಕರ ಸ್ಥಿರ ಪ್ರವಾಹ. ಗ್ರಾಹಕರ ನಿಷ್ಠೆ ಮತ್ತು ಪುನರಾವರ್ತಿತ ಭೇಟಿಗಳು ಗ್ರಾಹಕರ ತೃಪ್ತಿಯ ಸಂಕೇತವಾಗಿವೆ. ಸಂಸ್ಥೆ ಹುರುಪಿನ ಉದ್ಯೋಗ ಸಂಸ್ಕೃತಿಯನ್ನು ನಿರ್ಮಿಸಿದಲ್ಲಿ, ನೌಕರರು ಗ್ರಾಹಕರನ್ನು ಸಂತೃಪ್ತರನ್ನಾಗಿಸುತ್ತದೆ. ಹೀಗಾಗಿ ಉದ್ಯೋಗ ವಾತಾವರಣವು ಗ್ರಾಹಕರ ಸಂತೃಪ್ತಿಯಲ್ಲಿ ಪ್ರತಿಧ್ವನಿಸುತ್ತದೆ" ಎಂದು ಸಂಸ್ಥೆಯ ಪ್ರಾಯೋಜಕರಾದ ಶ್ರೀ ಶ್ರೀನಾಥ್ ಹೆಬ್ಬಾರ್ ವಿವರಿಸಿದರು.

ಲ್ಯಾಂಡ್ ಟ್ರೇಡ್ಸ್ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಸಂಸ್ಥೆಯನ್ನು ಅಕ್ಟೋಬರ್ 28, 1992ರಂದು ಯುವ ಉದ್ಯಮಿ ಶ್ರೀ ಕೆ. ಶ್ರೀನಾಥ್ ಹೆಬ್ಬಾರ್ ಅವರು ಸ್ಥಾಪಿಸಿದರು. ಮಂಗಳೂರಿನಲ್ಲಿ ವಸತಿ ಸಮುಚ್ಚಯಗಳನ್ನು ನಿರ್ಮಿಸುವಲ್ಲಿ ಅನುಭವ ಪಡೆದ ಅನಂತರ ಲ್ಯಾಂಡ್ ಟ್ರೇಡ್ಸ್ 2008ರಲ್ಲಿ ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಮುಂದಾಯಿತು. ಈಗ ಇದು ನಗರದ ಪ್ರಮುಖ ಬಿಲ್ಡರ್‌ಗಳಲ್ಲಿ ಒಂದಾಗಿದೆ. ಇದು ಪ್ರತಿಷ್ಠಿತ ವಸತಿ ಯೋಜನೆಗಳಾದ 'ಸಾಯಿಗ್ರ್ಯಾಂಡಿಯರ್', 'ವೌರಿಷ್ಕಾ ಪ್ಯಾಲೇಸ್', 'ಅಟ್ಲಾಂಟಿಸ್' ಮತ್ತು 'ಸಾಲಿಟೇರ್' ಸೇರಿದಂತೆ ಹಲವಾರು ಯೋಜನೆಗಳನ್ನು ಪೂರ್ಣಗೊಳಿಸಿದೆ ಹಾಗೂ ಸಂಸ್ಥೆಯು 3,000ಕ್ಕಿಂತಲೂ ಹೆಚ್ಚು ಮನೆಗಳನ್ನೂ ಸೇರಿದಂತೆ ಈಗಾಗಲೇ 38 ವಸತಿ ಯೋಜನೆಗಳನ್ನೂ ಪೂರ್ಣಗೊಳಿಸಿದ್ದು ಒಟ್ಟು 41.32 ಲಕ್ಷ ಚದರ ಅಡಿ ವಿಸ್ತೀರ್ಣದ ಕಟ್ಟಡಗಳನ್ನು ನಿರ್ಮಿಸಿರುತ್ತದೆ.

ಲ್ಯಾಂಡ್ ಟ್ರೇಡ್ಸ್ ಸಂಸ್ಥೆಯ ನಾಲ್ಕು ಯೋಜನೆಗಳು ಪ್ರಸ್ತುತ ನಿರ್ಮಾಣ ಹಂತದಲ್ಲಿವೆ. 50 ಅಪಾರ್ಟ್‌ಮೆಂಟ್ ಹೊಂದಿರುವ **'ನಕ್ಷತ್ರ'**ವು ಒಂದು ಪ್ರೀಮಿಯಂ ಕೊಡುಗೆಯಾಗಿದ್ದು, ಮಣ್ಣಗುಡ್ಡದ ಗಾಂಧೀನಗರದಲ್ಲಿದೆ. ದೇರೇಬೈಲ್‌ನಲ್ಲಿರುವ **'ಹ್ಯಾಬಿಟ್ಯಾಟ್ ವನ್ 54'** ಬಜೆಟ್ ಅಪಾರ್ಟ್‌ಮೆಂಟ್ ಸಂಕೀರ್ಣವಾಗಿದ್ದು, 154 ಒಂದು ಮತ್ತು ಎರಡು ಬೆಡ್‌ರೂಮ್ ಅಪಾರ್ಟ್‌ಮೆಂಟ್‌ಗಳನ್ನು ಹೊಂದಿದೆ. ಕಾರ್‌ಸ್ಟ್ರೀಟ್‌ನಲ್ಲಿ **'ಅನಂತೇಶ್'** ವಾಣಿಜ್ಯ ಸಂಕೀರ್ಣ ನಿರ್ಮಿಸಲಾಗುತ್ತಿದೆ. **'ಎಮರಾಲ್ಡ್ ಬೇ'** ಎಂಬುದು ಐಷಾರಾಮಿ ಬೀಚ್ ಸಮುಚ್ಚಯವಾಗಿದ್ದು ಸುರತ್ಕಲ್‌ನಲ್ಲಿ ಅಭಿವೃದ್ಧಿಗೊಳ್ಳುತ್ತಿದ್ದು, ಪೂರ್ಣ ಪ್ರಮಾಣದ ಕ್ಲಬ್ ಹೌಸ್, ಈಜುಕೊಳ ಮತ್ತು ಅದ್ಭುತ ಭೂದೃಶ್ಯದಂತಹ ಪ್ರೀಮಿಯಂ ಸೌಲಭ್ಯಗಳನ್ನು ಹೊಂದಿದೆ. ಕಂಪೆನಿಯು ಶೀಘ್ರದಲ್ಲೇ ಮತ್ತೊಂದು ಪ್ರೀಮಿಯಂ ವಸತಿ ಸಂಕೀರ್ಣವನ್ನು ಬೆಂದೂರ್‌ನಲ್ಲಿ ಪ್ರಾರಂಭಿಸಲು ಮುಂದಾಗಿದೆ.

## ಮನೋವೈದ್ಯಶಾಸ್ತ್ರ ವಿಭಾಗದ ಪ್ರೊಫೆಸರ್ ಮತ್ತು ಮುಖ್ಯಸ್ಥರಾಗಿ ಡಾ। ಹರೀಶ್ ದೇಲಂತಬೆಟ್ಟು ನೇಮಕ



ಬಂಟ್ವಾಳ ತಾಲೂಕಿನ ಕನ್ಯಾನದ ಬಳಿಯ **ಡಾ। ಹರೀಶ್ ದೇಲಂತಬೆಟ್ಟು** ಅವರು ಶಿವಮೊಗ್ಗದ ಸುಬ್ಬಯ್ಯ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸಯನ್ಸಸ್, ಡೆಂಟಲ್ ಸಯನ್ಸಸ್ ಎಂಡ್ ಅಲಾಯ್ಡ್ ಇನ್‌ಸ್ಟಿಟ್ಯೂಟ್‌ನಲ್ಲಿ ಮನೋವೈದ್ಯಶಾಸ್ತ್ರ ವಿಭಾಗದ ಪ್ರೊಫೆಸರ್ ಮತ್ತು ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ.

*ಅವರಿಗೆ 'ಜ್ಞಾನಶಕ್ತಿ' ಬಳಗವು ಶುಭವನ್ನು ಹಾರೈಸುತ್ತದೆ.*

**2021**
**ಹೊಸ ಮನ್ವಂತರದ ಶುಭೋದಯವಾಗಲಿ. ಹೊಸ ಬೆಳಕು ಮೂಡಿಬರಲಿ.**

**ರಾಜೇಶ್ ಪವರ್ ಪ್ರೆಸ್**
ದರ್ಬೆ, ಪುತ್ತೂರು, ದ. ಕ.
✆ : (08251) 231696, 231697

ಪತ್ರಿಕೆಗೆ ಶುಭ ಬಯಸುವ–
**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**



*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
**2nd Floor, Ozanam Complex, Church Building**
**Main Road, BAJPE, MANGALORE**



*We undertake all types of Electrical, Plumbing and Sanitary works*

## ಹೊಸ ಬಾಳಿನ ಹೊಸಿಲಲಿ ನಿಂತಿರುವ...



ಪುತ್ತೂರಿನ ಡಾ. ಎಂ. ರಾಮಕೃಷ್ಣ ರಾವ್ ಹಾಗೂ ಶ್ರೀಮತಿ ಗಾಯತ್ರಿಯವರ ಸುಪುತ್ರ **ಚಿ। ಅಭಿಜಿತ್** ಮತ್ತು ಮಂಗಳೂರಿನ ಶ್ರೀ ಶ್ರೀಪಾದ ರಾವ್ ಮತ್ತು ಶ್ರೀಮತಿ ನೀರಜ್‌ರವರ ಸುಪುತ್ರಿ **ಚಿ। ಸೌ। ಅನುಶ್ರೀಯವರ** ವಿವಾಹವು ತಾರೀಕು 23–12–2020ನೇ ಬುಧವಾರ ಮಂಗಳೂರಿನ 'ಟಿ. ವಿ. ರಮಣ್ ಪೈ ಕನ್ವೆನ್ಶನ್ ಸೆಂಟರ್'ನಲ್ಲಿ ನಡೆಯಿತು.

ತಾಳೆಪ್ಪಾಡಿ ಶ್ರೀ ಶ್ರೀಕಾಂತ್ ಹಾಗೂ ಶ್ರೀಮತಿ ವಿದ್ಯಾರವರ ಸುಪುತ್ರ **ಚಿ। ವಿಖ್ಯಾತ್** ಮತ್ತು ಶ್ರೀ ಜಯರಾವ್ ಶ್ಯಾನುಭೋಗ್ ಶ್ರೀಮತಿ ಭಾನುಮತಿಯುವರ ಸುಪುತ್ರಿ **ಚಿ। ಸೌ। ನಿಖಿತಾರವರ** ವಿವಾಹವು ತಾ. 03–01–2021ನೇ ರವಿವಾರ ಕುಂದಾಪುರ ಕೋಟೇಶ್ವರದ 'ಸರಸ್ವತಿ ಕಲ್ಯಾಣ ಮಂಟಪ'ದಲ್ಲಿ ಜರುಗಿತು.

## ಭವತೀ ಭಿಕ್ಷಾಂ ದೇಹಿ..



ಶ್ರೀಮತಿ ಪಲ್ಲವಿ ರಾವ್ ಮತ್ತು ಶ್ರೀ ಅರವಿಂದ ರಾವ್‌ರವರ ಸುಪುತ್ರ **ಚಿ। ಆದಿ ರಾವ್**‌ನ ಬ್ರಹ್ಮೋಪದೇಶ ತಾರೀಕು 08–01–2021ನೇ ಶುಕ್ರವಾರ ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾ'ದಲ್ಲಿ ಜರುಗಿತು.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ, ಬೆಂಗಳೂರಿನ ಮಾಜಿ ಉಪಾಧ್ಯಕ್ಷರಾದ **ಶ್ರೀ ಪುತ್ತಿಗೆ ಶ್ರೀನಿವಾಸ್ ರಾವ್** ತಾ. 25–12–2020ನೇ ಶುಕ್ರವಾರದಂದು ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.



ಹೊಳೆಹೊನ್ನೂರಿನ (ಬಾರ್ಕೂರು) **ಶ್ರೀ ಬಿ. ಕೆ. ಸುಬ್ಬ ರಾವ್** (76)ರವರು ತಾ. 25–12–2020ನೇ ಶುಕ್ರವಾರ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.



**ಎಲ್ಲೂರಿನ ಶ್ರೀ ಶಾರದ ಶ್ರೀನಿವಾಸ್ ಶ್ಯಾನುಭೋಗ್** (64) ಇವರು ತಾ. 28–12–2020ನೇ ಸೋಮವಾರ ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.



**ಶ್ರೀಯುತ ಶಿವಾಜಿ ರಾವ್ ಎನ್. ಎಸ್. ಮೇಲಿನಸ್ಟಾರ** (ದಿ। ನಾರಾಯಣ ರಾವ್ ಮತ್ತು ದಿ। ವೇದಾವತಿ ಇವರ ಪುತ್ರ) ಇವರು 26–12–2020ನೇ ಶನಿವಾರ ರಾತ್ರಿ ಶಿವೈಕ್ಯರಾಗಿರುತ್ತಾರೆ. ಇವರು ಪತ್ನಿ, 3 ಗಂಡುಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗದವರನ್ನು ಅಗಲಿದ್ದಾರೆ.


**ಶ್ರೀ ಶ್ರೀ ಭಾರತೀತೀರ್ಥ ಸಭಾಭವನ**
ಮಠದಬೆಟ್ಟು, ಪುತ್ತೂರು

ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದ ವಠಾರದಲ್ಲಿ
ಶೃಂಗೇರಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ
ಅಮೃತಹಸ್ತದಿಂದ ಉದ್ಘಾಟನೆಗೊಂಡಿರುವ ಸುಸಜ್ಜಿತ
'ಶ್ರೀ ಶ್ರೀ ಭಾರತೀತೀರ್ಥ ಸಭಾಭವನ'ವು
ಸಮಾಜ ಬಾಂಧವರ ಅನುಕೂಲತೆಗೆ ತಕ್ಕಂತೆ
**ಹೋಮಾದಿಗಳು, ವಿಶೇಷ ಪೂಜಾದಿಗಳು**
**ಮದುವೆ, ಉಪನಯನ ಮುಂತಾದ ಸಮಾರಂಭಗಳಿಗೆ**
ಲಭ್ಯವಿರುತ್ತದೆ.
ಅಲ್ಲದೇ ಇತರ ಸಭಾ ಕಾರ್ಯಕ್ರಮಗಳಿಗೂ ಅವಕಾಶವಿರುತ್ತದೆ.

ವಿಶೇಷ ಮಾಹಿತಿಗೆ ಸಂಪರ್ಕಿಸಿರಿ :
ಯಂ. ನಾಗೇಶ ಶರ್ಮ — ಮೊಬೈಲ್ : 9901247080
ಯಂ. ಪ್ರಶಾಂತ ಶರ್ಮ — ಮೊಬೈಲ್ : 9902022410




ಕಾರ್ಕಳದಲ್ಲಿ ಪ್ರಥಮ

ತಾಜಾ ಹಾಗೂ ಉತ್ತಮ ಗುಣಮಟ್ಟದ ಎಲ್ಲಾ ರೀತಿಯ ಹಿಟ್ಟು ಒಂದೇ ಜಾಗದಲ್ಲಿ ಲಭ್ಯ. ನಮ್ಮಲ್ಲಿ ಗೋದಿ, ಜೋಳ, ಅಕ್ಕಿ, ರಾಗಿ ಹಿಟ್ಟು ಹಾಗೂ ಅಕ್ಕಿ ರವೆ ದೊರೆಯುತ್ತದೆ.

**ಪ್ರಕೃತಿ ಸ್ಟೋರ್ಸ್**
ಪ್ರಸಾದ್ ಭವನ (ವಿ. ಕೆ. ಡೆಕೋರೇಟರ್ಸ್ ಬಳಿ)
ಹೊಟೇಲ್ ಮಹಾಲಸಾ ಎದುರು, ತೆಳ್ಳಾರು ರಸ್ತೆ, ಕಾರ್ಕಳ

*For The First Time We Are Introducing Fresh And Good Quality Of Rice, Ragi, Jowar & Wheat Flour Along With Rice Rava In Single Venue*

Contact: Prakrithi Stores, Prasad Bhavana (Near: V. K. Decorators), Opp: Hotel Mahalasa, Tellar Road, Karkala. Mob: 8296375933


ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174

**ರವಿಕಿರಣ್ ಕ್ರೊಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241






Prop. : *Kishore Kumar Kedige*
Ph. : 2231524
M. : 9880726325





**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*







ಪತ್ರಿಕೆಗೆ ಶುಭ ಬಯಸುವ–
**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003






ಪತ್ರಿಕೆಗೆ ಶುಭ ಬಯಸುವ–
**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
ಪ್ರಮೋದ್ ಟವರ್ಸ್, ಮಂಗಳೂರು

# ವೈದ್ಯಕೀಯ ನೆರವು





ತಾ. 6–12–2020ರ ಬೆಳಗ್ಗೆ 9–00 ಗಂಟೆಗೆ ಮೂಡಬಿದಿರೆ ಶ್ರೀ ಸುರೇಶ್ ರಾವ್ ಅವರ ಮನೆಯಲ್ಲಿ ಶ್ರೀ ಗಣೇಶ್ ರಾವ್ ಮತ್ತು ಶ್ರೀಮತಿ ಮಲ್ಲಿಕಾ ದಂಪತಿಗಳನ್ನು ಭೇಟಿ ಮಾಡಿ ಅವರ ಆರೋಗ್ಯವೃದ್ಧಿ – ವೈದ್ಯಕೀಯ ನೆರವಿಗಾಗಿ ಮೂಡಬಿದಿರೆ ಸಂಘದ ಮೂಲಕ ಸಂಗ್ರಹಿಸಲ್ಪಟ್ಟ ನಿಧಿ ರೂ. 1,57,009/–ನ್ನು ಅವರಿಗೆ ಗೌರವಪೂರ್ವಕವಾಗಿ ಸಮರ್ಪಿಸಿದ ಸಂಘದ ಅಧ್ಯಕ್ಷ ಶ್ರೀ ದೇವಾನಂದ ಭಟ್ ಹಾಗೂ ಸಂಘದ ಪದಾಧಿಕಾರಿಗಳು, ಸದಸ್ಯರು, ಬಂಧುಗಳು ಸಕಾಲದಲ್ಲಿ ಒಟ್ಟು ಸೇರಿ ಅವರಿಗೆ ಅವರ ಕುಟುಂಬಕ್ಕೆ ಆತ್ಮಸ್ಥೈರ್ಯ ತುಂಬಿ ಆರೋಗ್ಯಪೂರ್ಣ ಭವಿಷ್ಯ ಹಾರೈಸಿದರು.

ತಾ. 12–12–2020ರ ಸಂಜೆ 4–00 ಗಂಟೆಗೆ ಮೂಡುಬಿದಿರೆ ಶ್ರೀ ಸುರೇಶ್ ರಾವ್ ಅವರ ಮನೆಯಲ್ಲಿ ಶ್ರೀ ಗಣೇಶ್ ರಾವ್ ಮತ್ತು ಶ್ರೀಮತಿ ಮಲ್ಲಿಕಾ ದಂಪತಿಗಳನ್ನು ಭೇಟಿ ಮಾಡಿ ಅವರ ಆರೋಗ್ಯವೃದ್ಧಿ – ವೈದ್ಯಕೀಯ ನೆರವಿಗಾಗಿ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಂಘ, ಬೆಂಗಳೂರು ರೂ. 50,000/–ವನ್ನು ಗೌರವಪೂರ್ವಕವಾಗಿ ಸಮರ್ಪಿಸಿದ ಸಂಘದ ಸದಸ್ಯರಾದ ಶ್ರೀ ರಾಕೇಶ್ ರಾವ್ ಮತ್ತು ಶ್ರೀ ಶ್ರೀಶಾಂತ್ ಅವರು ಕುಟುಂಬಕ್ಕೆ ಆತ್ಮಸ್ಥೈರ್ಯ ತುಂಬಿ ಆರೋಗ್ಯಪೂರ್ಣ ಭವಿಷ್ಯ ಹಾರೈಸಿದರು.



# ಕಾರ್ಕಳದ ಅಶ್ವಿನ್ ಎಮ್. ರಾವ್ ಅವರಿಗೆ ಚೀಫ್ ಕಮಾಂಡರ್ ಆಫ್ ನೇವಲ್‌ಸ್ಟಾಫ್ ಪ್ರಶಸ್ತಿ ಪದಕ



'ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬ ಉದಾತ್ತ ಧ್ಯೇಯದೊಂದಿಗೆ ಜನನಿಯ ಸೇವಾಮನೋಭಾವ ಮೈಗೂಡಿಸಿಕೊಂಡು ತಂದೆಯ ದಕ್ಷ ಪ್ರಾಮಾಣಿಕತೆಯನ್ನು ರೂಢಿಸಿಕೊಂಡು ಜನ್ಮಭೂಮಿಯ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡಿರುವ ಕನ್ನಡನಾಡಿನ ಕಾರ್ಕಳದ ಕಮಾಂಡರ್ ಅಶ್ವಿನ್ ಎಂ. ರಾವ್ ಇದೀಗ ಭಾರತೀಯ ನೌಕಾಪಡೆಯ ಸಿ.ಎನ್.ಎಸ್. ಅಂದರೆ 'ಚೀಫ್ ಕಮಾಂಡರ್ ಆಫ್ ನೇವಲ್ ಸ್ಟಾಫ್' ಪ್ರಶಸ್ತಿ ಪದಕ ಪಡೆದುಕೊಂಡಿರುವುದು ಕಾರ್ಕಳಕ್ಕೆ ಒಂದು ಹೆಮ್ಮೆಯ ವಿಚಾರ.

1981ರ ಅಕ್ಟೋಬರ್ 16ರಂದು ಶ್ರೀ ಭುವನೇಂದ್ರ ಪ್ರೌಢಶಾಲಾ ಮುಖ್ಯೋಪಾಧ್ಯಾಯ ಶುಂಠಿಪಾಡಿ ಮನೋಹರ ರಾವ್ ಹಾಗೂ ತೆಳ್ಳಾರು ಸರಕಾರಿ ಪ್ರೌಢಶಾಲೆ ಸ್ಥಾಪಕ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಾವಿತ್ರಿ ಮನೋಹರ್ ಅವರ ಪುತ್ರರಾಗಿದ್ದಾರೆ. ಸರಕಾರಿ ಕನ್ನಡ ಪ್ರಾಥಮಿಕ ಶಾಲೆ ಪೆರುವಾಜೆಯ ವಿದ್ಯಾರ್ಥಿಯಾಗಿದ್ದಾಗಲೇ ಸಾಹಸ ಮನೋಭಾವವನ್ನು ಮೈಗೂಡಿಸಿಕೊಂಡ ಅಶ್ವಿನ್ ಎಮ್. ರಾವ್ ಮುಂದೆ ಶ್ರೀ ಭುವನೇಂದ್ರ ಪ್ರೌಢಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉನ್ನತದರ್ಜೆಯಲ್ಲಿ ಉತ್ತೀರ್ಣರಾದರು. ನಿಟ್ಟೆಯ ವಿದ್ಯಾಸಂಸ್ಥೆಯಲ್ಲಿ ಪಿ.ಯು.ಸಿ.ಯಿಂದ ಬಿ.ಇ. ಪದವಿಯ ವರೆಗೂ ಶಿಕ್ಷಣ ಪಡೆದರು.

ಪ್ರಾಥಮಿಕ ಶಾಲೆಯಲ್ಲಿ ಸ್ಕೌಟ್ ವಿದ್ಯಾರ್ಥಿಯಾಗಿದ್ದ ಸಮಯದಿಂದಲೂ ಗೈಡ್ ಕ್ಯಾಪ್ಟನ್ ಆಗಿದ್ದ ತಾಯಿಯಿಂದ ದೇಶಸೇವೆ, ಸೇವಾಮನೋಭಾವ ಮೈಗೂಡಿಸಿಕೊಂಡರು. ಕಾಲೇಜಿನಲ್ಲಿ ಓದುತ್ತಿದ್ದಾಗ, ಎನ್‌ಎಸ್‌ಎಸ್ ಕ್ಯಾಂಪ್‌ಗಳಲ್ಲಿ ಭಾಗವಹಿಸಿ ಸಮಾಜಸೇವೆಯಲ್ಲಿ ತೊಡಗಿಸಿಕೊಂಡರು.

ಬಾಲ್ಯದಿಂದಲೂ ಕ್ರೀಡಾಸಕ್ತರಾಗಿದ್ದ ಇವರಿಗೆ ನೂರಾರು ಬಹುಮಾನಗಳು ದೊರೆತಿವೆ. ವಿಶ್ವವಿದ್ಯಾನಿಲಯದ ಆಟಗಾರರಾಗಿಯೂ ಆಯ್ಕೆಯಾಗಿದ್ದರು ಅಲ್ಲದೆ ಯಕ್ಷಗಾನದ ತರಬೇತಿ ಪಡೆದು ಅನೇಕ ಪ್ರದರ್ಶನಗಳಲ್ಲಿ ಅಭಿನಯಿಸಿ ಜನಮೆಚ್ಚುಗೆ ಪಡೆದಿದ್ದಾರೆ.

ಈ ಎಲ್ಲಾ ಪ್ರತಿಭೆಗಳ ಜೊತೆಗೆ ಅವರಿಗೆ ಸ್ನಾತಕೋತ್ತರ ಪದವಿಗೆ ಸೇರಲು ಮನಸ್ಸು ಬರಲಿಲ್ಲ. ಭಾರತೀಯ ನೌಕಾದಳದ ತರಬೇತಿಗೆ ಸೇರಬಯಸಿದರು. ಅಂತೆಯೇ ತಾಯಿಯ ಪ್ರೋತ್ಸಾಹದಿಂದ ಲಿಖಿತ ಪರೀಕ್ಷೆ ಬರೆದರು. ಕರ್ನಾಟಕದಿಂದ ಪರೀಕ್ಷೆಗೆ ಹೋದ 600 ಜನ ಅಭ್ಯರ್ಥಿಗಳಲ್ಲಿ ಲಿಖಿತ ಮತ್ತು ದೈಹಿಕ ಪ್ರಾತ್ಯಕ್ಷಿಕೆ ತರಬೇತಿಯಲ್ಲಿ ಆಯ್ಕೆಗೊಂಡದ್ದು ಇವರೊಬ್ಬರೇ ಎಂಬುದೂ ಕಾರ್ಕಳದ ಕನ್ನಡಿಗರಿಗೆ ಹೆಮ್ಮೆಯ ವಿಚಾರ. ಮಧ್ಯಪ್ರದೇಶದ ಭೋಪಾಲ್ ತರಬೇತಿ ಕೇಂದ್ರ ಮತ್ತು ಗೋವಾದ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆದರು.

2005ರಲ್ಲಿ ಕೊಚ್ಚಿಯ ನೌಕಾದಳದ ಸಬ್ ಲೆಫ್ಟಿನೆಂಟ್ ಆಫೀಸರ್ ಆಗಿ ನೇಮಕಗೊಂಡರು. ಅನಂತರ 2005ರಿಂದ 2007ರ ವರೆಗೆ ಐ.ಎನ್.ಎಸ್. ತಬರ್, ಐಎನ್‌ಎಸ್ ವಲ್ಸುರ. ಐಎನ್‌ಎಸ್ ತಲ್ವಾರ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಲೇ 2007ರಲ್ಲಿ ಏರೋನಾಟಿಕ್ ಎಂಜಿನಿಯರಿಂಗ್ ಅಭ್ಯಾಸ ಮಾಡಿ ಎಂ.ಟೆಕ್. ಪದವಿ ಪಡೆದರು. 2008ರಿಂದ 2011ರ ವರೆಗೆ ಏರೋನಾಟಿಕ್ ವಿಭಾಗದಲ್ಲಿ ಮಾನವರಹಿತ ಗಗನನೌಕೆಯ ಸ್ಕ್ವಾಡ್ರನ್ ಸ್ಪೆಷಲಿಸ್ಟ್ ಆಗಿ ಕರ್ತವ್ಯ ನಿರ್ವಹಿಸಿದರು. ಅನಂತರ ಕೊಚ್ಚಿಯ ಐ.ಎನ್.ಎಸ್. ಗರುಡದಲ್ಲಿ ಲೆಫ್ಟಿನೆಂಟ್ ಕಮಾಂಡರ್ ಆಗಿ ಪದೋನ್ನತಿ ಹೊಂದಿದ್ದರು.

ವಿದ್ಯೆ ಕಲಿಯುವುದರಲ್ಲಿ ತನ್ನನ್ನು ತಾನು ಮರೆಯುತ್ತಿದ್ದ ದಕ್ಷ ಸೇವಾನಿಷ್ಠ ಕಮಾಂಡರ್ ಅಶ್ವಿನ್ ಅವರ ಪ್ರತಿಭೆಗೆ ಪ್ರೋತ್ಸಾಹ ನೀಡಿ 2011ರಿಂದ 2013ರ ವರೆಗೆ ಐಐಟಿ ಕಾನ್ಪುರದಲ್ಲಿ ಕಂಪ್ಯೂಟರ್ ಸೈನ್ಸ್ ಎಂ.ಟೆಕ್. ಮಾಡಲು ಇಲಾಖೆ ಕಳುಹಿಸಿಕೊಟ್ಟಿದ್ದು ಅಲ್ಲದೆ ಉಚಿತ ವಾಸ್ತವ್ಯದ ವ್ಯವಸ್ಥೆ ನೀಡಿದ್ದು ಮಾತ್ರವಲ್ಲದೆ ಸಂಬಳ ಸಹಿತ ಎರಡು ವರ್ಷ ರಜೆ ನೀಡಿದ್ದು ಇವರ ಮೇಲೆ ರಕ್ಷಣಾ ಇಲಾಖೆ ಇಟ್ಟಿರುವ ಅಭಿಮಾನ ಎಂದೇ ಹೇಳಬೇಕು.'

2013ರಲ್ಲಿ ಮೂರನೆಯ ಸ್ನಾತಕೋತ್ತರ ಪದವಿಯನ್ನು ಪಡೆದ ಸೇವಾನಿಷ್ಠ ಅಶ್ವಿನ್‌ರವರಿಗೆ ನೌಕಾದಳದ ಪ್ರಧಾನ ಕಚೇರಿ ದೆಹಲಿಯಲ್ಲಿ ಸಿಸ್ಟಮ್ಸ್ ಸ್ಪೆಷಲಿಸ್ಟ್ ಆಗಿ ನಿಯುಕ್ತಿಯಾದರು. ಅನಂತರ 2017ರಲ್ಲಿ ಪದೋನ್ನತಿ ನೀಡಿ ಕಮಾಂಡರ್ ಆಗಿ ಕೊಚ್ಚಿಯ ಐಎನ್‌ಎಸ್ ಶಾರದಾದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೆ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಏರೋನಾಟಿಕ್ ಟ್ರೈನಿಂಗ್ ಸಂಸ್ಥೆಯ ನಿರ್ದೇಶಕರಾಗಿ ನಿಯುಕ್ತರಾಗಿದ್ದಾರೆ.

ಇದೀಗ ಕಾರ್ಕಳದ ಹೆಮ್ಮೆಯ ಕಮಾಂಡರ್ ಅಶ್ವಿನ್ ಎಮ್. ರಾವ್ ಅವರಿಗೆ ಭಾರತೀಯ ನೌಕಾಪಡೆಯ ಗೌರವದ ಸಿಎನ್‌ಎಸ್ ಅಂದರೆ ಚೀಫ್ ಕಮಾಂಡರ್ ಆಫ್ ನೇವಲ್ ಸ್ಟಾಫ್ ಎಂಬ ಪದಕ ನೀಡಿ ಪ್ರಶಸ್ತಿಯೊಂದಿಗೆ ಗೌರವಿಸಿರುವುದು ಕನ್ನಡದಲ್ಲಿ ಕಲಿತ ಕನ್ನಡಿಗನಿಗೆ ಪ್ರಯತ್ನಪಟ್ಟರೆ ಯಾವ ಸಾಧನೆಯೂ ಸುಲಭ ಎಂಬುದಕ್ಕೆ ನಿದರ್ಶನವಾಗಿದೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಅಷ್ಟು ದೊಡ್ಡ ಗೌರವಕ್ಕೆ ಪಾತ್ರವಾಗಿರುವುದು ನಮ್ಮ ಸಮಾಜಕ್ಕೆ ಅತ್ಯಂತ ಗೌರವದ ವಿಚಾರವಾಗಿದೆ. ಅವರು ತಮ್ಮ ಬದುಕಿನಲ್ಲಿ ಇನ್ನೂ ಹೆಚ್ಚಿನ ಶ್ರೇಯಸ್ಸನ್ನು ಪಡೆಯಲೆಂದು 'ಜ್ಞಾನಶಕ್ತಿ'ಯು ಹಾರೈಸುತ್ತದೆ.


*Manish Rao U.*

Tel : (O) 2223301
Mobile : 9448726499 / 8884284939

**NAVA COMPUTERS**



**Dealers in : C. C. Camera, Theft Alarm, Remote Locks**
**Computers Hardware and Peripherals**
**Computer Sales & Services**

**1st Floor, Bharath Building, P. M. Rao Road, Hampankatta, Mangaluru - 575 001**

Muralidhara Rao Adyapadi
Proprietor

Mob : 94480 27259
99803 16434



**SPANDANA**
Constructions

**IInd Floor (202)**
**'Yashodharathna', Sai Sharada Apts.**
**Near Sharada Vidyalaya, Kodialbail , Mangaluru - 3**

CUSTOMER'S SATISFACTION IS OUR MOTTO

## ಸಂಸ್ಕೃತ ಪ್ರಚಾರ ಏಕೆ, ಹೇಗೆ? ಒಂದು ಚಿಂತನೆ

ಸಂಸ್ಕೃತದಿಂದ ಕನ್ನಡಕ್ಕೆ ಬಾಧೆಯಿದೆ ಎಂಬ ಮಾತೂ ಇದೆ. ಆದರೆ ಕನ್ನಡ ಮಾಧ್ಯಮದಲ್ಲಿ ಬೇರೆ ಬೇರೆ ಪಠ್ಯಗಳು ತಯಾರಾಗಬೇಕಿದ್ದರೆ ಪದಸಂಪತ್ತಿಗೆ ಸಂಸ್ಕೃತದ ಭಂಡಾರವನ್ನು ತೆರೆದು ಅದರಲ್ಲಿರುವ ವಿಪುಲವಾದ ಸಿದ್ಧರೂಪದಲ್ಲಿರುವ ಪದಗಳನ್ನು ಉಪಯೋಗಿಸಿ ಸಂಪನ್ನವಾಗಿಸಿಕೊಳ್ಳುವುದರ ಮೇಲೆ ಅವಲಂಬಿತವಾಗಿದೆ. ಹಿಂದೆಯೂ ಇಂತೆಯೆ ಕೊಡು–ಕೊಳ್ಳುವ ವ್ಯಾಪಾರ ತತ್ಸಮ ತದ್ಭವಗಳಿಂದ ಸಂಪುಷ್ಟವಾದ ಕನ್ನಡ ಭಾಷೆ ಹಲವಾರು ಸ್ತರಗಳಲ್ಲಿ ಬೋಧಕ ಮಾಧ್ಯಮವಾಗಲು ಸಂಸ್ಕೃತದ ಸಹಾಯ ಬೇಕಾಗುತ್ತದೆ. ಹೀಗಾಗಿ ಕನ್ನಡ ಸಂಸ್ಕೃತಕ್ಕೆ ಅಥವಾ ಸಂಸ್ಕೃತ ಕನ್ನಡಕ್ಕೆ ವೈರಿಯಾಗುವುದಿಲ್ಲ. ದೇಶದ ಎಲ್ಲ ಭಾಷೆಗಳು ಇಂದು ರಾಷ್ಟ್ರಭಾಷೆಯ ಸ್ಥಾನ ಪಡೆದಿರುವುದಕ್ಕೆ ಸಂಸ್ಕೃತವೇ ಕಾರಣ ಎಂಬುದನ್ನು ಮರೆಯಬಾರದು. ಸಂಸ್ಕೃತವನ್ನು ಗುರುವಾಗಿಸೋಣ. ಇಂಗ್ಲಿಷನ್ನು ಮಿತ್ರನಾಗಿರಿಸೋಣ. ಕನ್ನಡವನ್ನು ಬೆಳೆಸೋಣ ಇದರಿಂದ ದೇಶ ಭಾಷೆಗಳಾದ ಸಂಸ್ಕೃತ ಕನ್ನಡಗಳೆರಡು ಬೆಳೆದು ಬಾಳಲು ಸಾಧ್ಯವಾಗುತ್ತದೆ. ಗುರುಸ್ಥಾನದ ಸಂಸ್ಕೃತದಿಂದ ನಾವು ಪಡೆಯಬೇಕಾದದ್ದನ್ನೆಲ್ಲ ಪಡೆದಿದ್ದೇವೆಯೇ? ಸಂಸ್ಕೃತದಲ್ಲಿರುವ ಮೂಲ ದಾರ್ಶನಿಕ ಗ್ರಂಥಗಳನ್ನು ವೇದ, ವೇದಾಂತ, ಶಾಸ್ತ್ರ–ಸೂತ್ರಗಳನ್ನೆಲ್ಲ ಭಾಷಾಂತರ ಮಾಡುವುದು ಇನ್ನೂ ಉಳಿದಿದೆ. ಹಾಗೆಯೇ ಕನ್ನಡ ಸಂಸ್ಕೃತಗಳೆರಡನ್ನೂ ಬಲ್ಲವರು ಸಂಸ್ಕೃತವನ್ನು ಬೆಳೆಸಲು ಶಾಸ್ತ್ರೀಯವಾಗಿ ಅಭ್ಯಾಸಮಾಡಿ ವಿದ್ವಾಂಸರಾಗುವ ಆವಶ್ಯಕತೆ ಹೊಸ ರಾಷ್ಟ್ರೀಯ ಶಿಕ್ಷಣನೀತಿ 2020ರಿಂದಾಗಿ ಸ್ಪಷ್ಟವಾಗಿ ಕಾಣಬರುತ್ತದೆ.

ಕೆಲವು ಸಂಸ್ಕೃತ ಗ್ರಂಥಗಳು ತಾಡಪತ್ರದಲ್ಲಿ ಉಳಿದುಬಿಟ್ಟಿವೆ. ದೇಶದಾದ್ಯಂತ 30 ಲಕ್ಷಕ್ಕೂ ಮಿಕ್ಕಿ ತಾಡಪತ್ರಗಳು ಸಂಸ್ಕೃತದಲ್ಲಿದ್ದು ಇದರ ಸಂರಕ್ಷಣೆಗೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಇದರಲ್ಲಿರುವ ವಿಷಯ ಜನಸಾಮಾನ್ಯರಿಗೆ ತಿಳಿಯಬೇಕಾಗಿದೆ. ಅದರ ಸಾಹಿತ್ಯ ಬೇರೆ ಬೇರೆ ಭಾಷೆಗಳಲ್ಲಿ ಸ್ಪಷ್ಟವಾಗಬೇಕಿದೆ. ಕೆಲವು ಉತ್ತಮ ಸಂಸ್ಕೃತ ಗ್ರಂಥಗಳು ದೇಶೀಯ ಭಾಷೆಗಳಿಗೆ ಭಾಷಾಂತರವಾಗಬೇಕಿದೆ. ಉದಾಹರಣೆಗೆ ಕೆಲವು ಇಂತಿವೆ :

| | | |
|---|---|---|
| ಕವಿ | – | ಗ್ರಂಥ |
| ಭತೃಹರಿ | – | ವಾಕ್ಯಪದೀಯ |
| ನಾಗೇಶ ಭಟ್ಟ | – | ಲಘು ಮಂಜೂಷಾ |
| ಗೌತಮ | – | ನ್ಯಾಯಸೂತ್ರ ವಾತ್ಸಾಯನ ಭಾಷ್ಯ ಸಮೇತ |
| ಕಣಾದ | – | ಮೋಷಿಕ ಸೂತ್ರ ಪ್ರಶಸ್ತಪಾದ ಭಾಷ್ಯಸಹಿತ |
| ಅನ್ನಂಭಟ್ಟ | – | ಸಂಗ್ರಹ ದೀಪಿಕಾ ಸಹಿತ |
| ಜೈಮಿನೀ | – | ಮಿಮಾಂಸಾ ಸೂಕ್ತ ಶಾಬರ ಭಾಷ್ಯ ಸಹಿತ |
| ವಿಜ್ಞಾನೇಶ್ವರ | – | ಯಾಜ್ಞವಲ್ಯ ಸ್ಮೃತಿ ವ್ಯಾಖ್ಯಾನ ಸಹಿತ |

ಇತ್ಯಾದಿ, ಇತ್ಯಾದಿ ಕೆಲವು ಈಗಾಗಲೇ ಭಾಷಾಂತರವಾಗಿದೆ.

ಸಂಸ್ಕೃತದಲ್ಲಿ ಏನಿದೆ? ಇದನ್ನು ತಿಳಿದುಕೊಳ್ಳುವುದಕ್ಕೆ ನಮ್ಮಲ್ಲಿ ಸ್ವಲ್ಪವಾದರೂ ಉತ್ಸಾಹ ಬೇಡವೇ? ಸಂಸ್ಕೃತವನ್ನು ತಿಳಿದುಕೊಳ್ಳಲು ಪಾಶ್ಚಾತ್ಯರು ತೋರುತ್ತಿರುವ ಉತ್ಸಾಹ, ಕುತೂಹಲವನ್ನು ನಮ್ಮ ಸಂಸ್ಕೃತ ತಿಳಿದಿರುವ ವಿದ್ಯಾವಂತರು ಮತ್ತು ಇತರ ವಿದ್ಯಾವಂತ ವರ್ಗದವರು ತಳೆದಿಲ್ಲ. ನಾವು ಇತರರಿಂದ ಸಂಸ್ಕೃತವನ್ನು ತಿಳಿಯಬೇಕಾದ ಕಾಲ ಬರಬಹುದು ಅವರು ಸಂಸ್ಕೃತದಲ್ಲಿ ರಚಿಸಿರುವ ಸಾಹಿತ್ಯ ಹಳೆಯದನ್ನು ಹೊರತಂದು ಚರ್ಚಿಸುತ್ತಿರುವುದು ಮೊದಲಾದುವು ನಮ್ಮಲ್ಲಿ ನಡೆಯುತ್ತಿಲ್ಲ. ನಾವು ಕೆಲವು ಹಳೆಯದನ್ನೇ ಹಳೆಯ ಗ್ರಂಥಗಳನ್ನೇ ಮತ್ತೆ ಮತ್ತೆ ಹೊರತರುತ್ತಿದ್ದೇವೆಯೇ? ಪ್ರಶ್ನಿಸಿಕೊಳ್ಳಲು ಇದು ಸಕಾಲ, ಹೊಸ ಸಾಹಿತ್ಯ ಸಂಸ್ಕೃತದಲ್ಲಿ ಹೊರಬರಬೇಕು. ನಮ್ಮವರಿಂದಲೇ ನಮ್ಮ ದೃಷ್ಟಿಕೋನದಿಂದಲೇ ರಚನೆಯಾಗಬೇಕು. ನಮ್ಮ ಸಂಸ್ಕೃತ ಸಾಹಿತ್ಯರಾಶಿಯನ್ನು ಮೌಖಿಕವಾಗಿ ಕಾಪಾಡಿಕೊಂಡು ಬಂದ ನಮ್ಮ ಹಿರಿಯರುಗಳ ಋಣ ತೀರಿಸಬೇಕು. ಎಂತಹ ಸಂಕಟ ಪರಿಸ್ಥಿತಿಯಲ್ಲಿ ಈ ಸಾಹಿತ್ಯರಾಶಿ ನಮಗೆ ಮೌಖಿಕವಾಗಿ ಒಬ್ಬರಿಂದ ಒಬ್ಬರಿಗೆ ವರ್ಗಾಯಿಸಲ್ಪಡಬೇಕು.

**– ಎಂ. ಆರ್. ವಾಸುದೇವ, ಅಧ್ಯಕ್ಷರು, 'ಸಂಸ್ಕೃತ ಭಾರತಿ', ಮಂಗಳೂರು**

## ಮೂಡುಬಿದಿರೆ ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು (ರಿ.) ಮಹಾಸಭೆ



ಮೂಡುಬಿದಿರೆ ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು (ರಿ.) ಇದರ 32ನೇ ಮಹಾಸಭೆ, ಶ್ರೀ ಸತ್ಯನಾರಾಯಣ ಪೂಜೆಯು ದಿನಾಂಕ 21–12–2020ರಂದು ಅಲಂಗಾರು ಶ್ರೀ ಜಯರಾಮ ರಾವ್ ಅವರ 'ಅನುಗ್ರಹ'ದಲ್ಲಿ ಜರಗಿತು. ಪರಿಷತ್‌ನ ಅಧ್ಯಕ್ಷರೂ, ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷರೂ ಆದ ಶ್ರೀ ದೇವಾನಂದ ಭಟ್ ಬೆಳುವಾಯಿ ದೀಪ ಪ್ರಜ್ವಲನಗೊಳಿಸಿ ಪರಿಷತ್‌ನ ಮುಂದಿನ ಕಾರ್ಯಯೋಜನೆಗಳಲ್ಲಿ ಶೃಂಗೇರಿ ಶ್ರೀ ಪೀಠದಿಂದ ಪೂಜ್ಯ ಗುರುಗಳ ಸೂಚನೆಯಂತೆ ಮೂಡಬಿದಿರೆಯಲ್ಲೊಂದು 'ಶ್ರೀ ಶಂಕರ ಭವನ' ನಿರ್ಮಾಣ ಮಾಡುವುದಾಗಿಯೂ ಮುಂದೆ ಶಂಕರ ಪಂಚಮಿ ಆಚರಣೆ, ಭಜನೆ ಇತ್ಯಾದಿ ಧಾರ್ಮಿಕ – ಸಾಂಸ್ಕೃತಿಕ ಹೀಗೆ ಇಲ್ಲಿ ಅನೇಕ ದೇವತಾ ಕಾರ್ಯಗಳನ್ನು ಜರಗಿಸುವ ಉದ್ದೇಶ ಹೊಂದಿದ್ದು ಇದರ ನಿವೇಶನಕ್ಕಾಗಿ ಬೊಕ್ಕಸ ಮನೆತನದ ಶ್ರೀ ಜಯರಾಮ ರಾವ್ – ಜ್ಯೋತಿ ದಂಪತಿಗಳಲ್ಲಿ ಸಂಘದ ಪರವಾಗಿ ವಿಜ್ಞಾಪಿಸಿದರು. "ಶಂಕರ ತತ್ವ ಸಂದೇಶ"ದ ಬಗ್ಗೆ ಬಹಳ ಮನೋಜ್ಞವಾಗಿ ಪುತ್ತೂರು ಅಂಬಿಕಾ ವಿದ್ಯಾಲಯದ ಪ್ರಾಂಶುಪಾಲರು ಡಾ। ವಿದ್ವಾನ್ ಗಾಳಿಮನೆ ವಿನಾಯಕ ಭಟ್ ಉಪನ್ಯಾಸ ನೀಡಿದರು.

ಸಮಾಜದ ಹಿರಿಯರೂ, ನಿವೃತ್ತ ಅಧ್ಯಾಪಕರೂ, ಸಾಮಾಜಿಕ ಹೋರಾಟಗಾರರೂ ಆದ ಕಟೀಲು ಶ್ರೀ ಅನಂತರಾಜ್ ರಾವ್ ಅವರನ್ನು ಗಣ್ಯರ ಸಮಕ್ಷ ಸಂಮಾನಿಸಲಾಯಿತು. ಬೆಂಗಳೂರು ಎಕ್ಸ್‌ಪರ್ಟೈಸ್ ಸಂಸ್ಥೆಯ ಮೇನೇಜರ್ ಶ್ರೀ ಭೋಜರಾಜ ರಾವ್ ಅವರು ವಿದ್ಯಾರ್ಥಿವೇತನ ನೀಡಿ ಮಕ್ಕಳನ್ನು ಪುರಸ್ಕರಿಸಿದರು. ಪರಿಷತ್ತಿಗೆ ನೂತನವಾಗಿ ಸೇರ್ಪಡೆಗೊಂಡ ಸದಸ್ಯರಿಗೆ ಅಭಿನಂದನೆ ಸಲ್ಲಿಸಲಾಯಿತು. ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಉಪಾಧ್ಯಕ್ಷರಾದ ಶ್ರೀ ಉದಯ ಬಾರ್ಕೂರು ಹಾಗೂ ಕಾರ್ಯದರ್ಶಿಯವರಾದ ಶ್ರೀ ಮುರಳೀಧರ್ ಶರ್ಮ ನಿಟ್ಟೆ ಇವರನ್ನು ಅಭಿನಂದಿಸಲಾಯಿತು. ಸಂಘದ ವಾರ್ಷಿಕ ವರದಿಯನ್ನು ಕಾರ್ಯದರ್ಶಿಯವರಾದ ಶ್ರೀ ಸುರೇಶ್ ರಾವ್ ಬೊಕ್ಕಸ ವಾಚಿಸಿದರು. ಲೆಕ್ಕಪತ್ರಗಳನ್ನು ಕೋಶಾಧಿಕಾರಿಯವರಾದ ಶ್ರೀ ವಸಂತರಾಜ್ ಬಿ. ಕೆ. ಮಂಡಿಸಿದರು. ಬಳಿಕ ಶ್ರೀ ಆದಿಶಂಕರ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ, ಪ್ರಸಾದ ವಿತರಣೆ ಸಂಪನ್ನಗೊಂಡಿತು. ಸಂಘದ ಗೌರವ ನಿರ್ದೇಶಕರು – ಕರ್ಣಾಟಕ ಬ್ಯಾಂಕ್ ಜನರಲ್ ಮೇನೇಜರ್ ಶ್ರೀ ಚಂದ್ರಶೇಖರ ರಾವ್ ಇವರು ಮಹಾಸಭೆಗೆ ಸಹಕರಿಸಿದ ಎಲ್ಲರಿಗೂ ಧನ್ಯವಾದವಿತ್ತರು.

***ಫೋಟೋ : ಶೋಭಾ ಡಿಜಿಟಲ್ ಸ್ಟುಡಿಯೋ, ಬೆಳುವಾಯಿ***


ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ವಗ್ಗ
✆ : 9448043969
8861497325
**ಶಿವಗಿರಿ ಎಂಟರ್‌ಪ್ರೈಸಸ್**
**SHIVAGIRI ENTERPRISES**





*Prop. : P. Srikanth Rao* Mobile : 9343361618
**M/s. SAMARPAN**
*HOUSE OF STATIONERY*
"Vijaya Nivas", Opp. Pio Mall
Bejai Church Road, Mangalore - 4





**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028



ಪತ್ರಿಕೆಗೆ ಶುಭ ಬಯಸುವ–
**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**





Phone : 0824 - 2440110, 2213946
**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)




## ಸುರತ್ಕಲ್ ಸಂಘದ ವಾರ್ಷಿಕ ಮಹಾಸಭೆ



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್, ಇದರ 8ನೇ ವರ್ಷದ ವಾರ್ಷಿಕ ಮಹಾಸಭೆಯು ತಾ. 6–12–2020ನೇ ಭಾನುವಾರ 2–30 ಗಂಟೆಗೆ ಸರಿಯಾಗಿ ಸಂಘದ ಗೌರವಾಧ್ಯಕ್ಷರಾದ ಶ್ರೀ ಭವಾನಿಶಂಕರ ರಾವ್ ಮಲ್ಲಮಾರು ಇವರ ಮನೆಯಲ್ಲಿ ಜರಗಿತು.

ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್ ವಹಿಸಿದ್ದರು. ವೇದಿಕೆಯಲ್ಲಿ ಗೌರವಾಧ್ಯಕ್ಷರಾದ ಶ್ರೀ ಎಂ. ಭವಾನಿಶಂಕರ ರಾವ್, ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭಾಗ್, ಶ್ರೀ ಗೋಪಾಲಕೃಷ್ಣ, ಕಾರ್ಯದರ್ಶಿಯವರಾದ ಶ್ರೀ ಫಾಲಚಂದ್ರ ಶರ್ಮ, ಯುವವೇದಿಕೆಯ ಅಧ್ಯಕ್ಷರಾದ ಶ್ರೀ ಸುಕುಮಾರ್ ಎಂ.ಯು. ಮಹಿಳಾವೇದಿಕೆಯ ಅಧ್ಯಕ್ಷೆ ಶ್ರೀಮತಿ ಪರಿಮಳ ಪ್ರಶಾಂತ್ ಇವರು ಉಪಸ್ಥಿತರಿದ್ದರು. ಕು। ಸಂಜನಾ ಹಾಗೂ ಕು। ಶ್ರೇಯಾ ಇವರು ಪ್ರಾರ್ಥನೆ ಮಾಡಿದರು. ಶ್ರೀ ಕೆ. ಮಾಧವ ರಾಯರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಫಾಲಚಂದ್ರ ಶರ್ಮ ಇವರು ವಾರ್ಷಿಕ ವರದಿಯನ್ನು ಮಂಡಿಸಿ, ಸಭೆಯ ಅನುಮೋದನೆ ಪಡೆದುಕೊಂಡರು. ಶ್ರೀ ರಾಘವೇಂದ್ರ ರಾವ್ ಸಿ. ಇವರು ಲೆಕ್ಕಪತ್ರಗಳನ್ನು, ಅಂದಾಜು ಆಯ–ವ್ಯಯವನ್ನು ಮಂಡಿಸಿ ಅನಂತರ ಅಂಗೀಕಾರಕ್ಕಾಗಿ ಸಭೆಯ ಅನುಮತಿಯನ್ನು ಪಡೆದರು ಹಾಗೂ ಕಾರ್ಯಕ್ರಮವನ್ನು ನಿರೂಪಿಸಿದರು.

ಅನಂತರ ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ವಿತರಿಸಲಾಯಿತು. ಬಳಿಕ ಸಂಘದ ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭಾಗರು ತನ್ನ ತಂದೆ ದಿ। ಶ್ರೀನಿವಾಸ್ ಶಾನುಭಾಗ್ ಮತ್ತು ತಾಯಿ ದಿ। ಕಾವೇರಮ್ಮರವರ ನೆನಪಿಗಾಗಿ ವಿದ್ಯಾನಿಧಿಗೆ ರೂ. 1,00,000/– ನೀಡಿರುವುದಕ್ಕಾಗಿ ಅವರನ್ನು ಸನ್ಮಾನಿಸಲಾಯಿತು. ಮಾತ್ರವಲ್ಲದೇ, ಸಂಘದ ಇನ್ನೋರ್ವ ಉಪಾಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ ಹಾಗೂ ಶ್ರೀಮತಿ ಕಾಂಚನಮಾಲಾ ಬಿ. ರಾವ್ ಇವರು ವಿದ್ಯಾನಿಧಿಗೆ ದೇಣಿಗೆ ನೀಡಿದುದಕ್ಕಾಗಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ನೂತನವಾಗಿ ವಿವಾಹವಾದ ಶ್ರೀ ಸನತ್ ಕುಮಾರ್ ದಂಪತಿಗಳಿಗೆ ಗುಲಾಬಿ ಹೂವನ್ನು ನೀಡಿ ಶುಭಾಶಯಗಳನ್ನು ಸಲ್ಲಿಸಲಾಯಿತು. ಅನಂತರ ಪುಟಾಣಿಗಳಿಂದ ಎರಡು ನೃತ್ಯಗಳು ಪ್ರದರ್ಶನವಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್ ಇವರು ಸಂಘವು ಬೆಳೆದು ಬಂದ ರೀತಿ ಹಾಗೂ ವಿದ್ಯಾನಿಧಿಯಿಂದ ಪಡೆದುಕೊಂಡ ವಿದ್ಯಾರ್ಥಿವೇತನದ ವಿದ್ಯಾರ್ಥಿಗಳಿಗೆ ತಾವು ಮುಂದೆ ಉದ್ಯೋಗ ಸೇರಿದ ಅನಂತರ ವಿದ್ಯಾನಿಧಿಯ ಠೇವಣಿಗೆ ನಿಧಿ ನೀಡಿ ಪ್ರೋತ್ಸಾಹಿಸಬೇಕಾಗಿ ಕೋರಿದರು. ಅನಂತರ ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಸುಕುಮಾರ್ ಎಂ.ಯು. ಈ ಸಂಘಕ್ಕೆ ಶಾಶ್ವತ ಕಟ್ಟಡವನ್ನು ರಚಿಸಲು ಪ್ರತ್ಯೇಕವಾಗಿ ಕಟ್ಟಡ ನಿಧಿಗೆ ದೇಣಿಗೆ ನೀಡುವಂತೆ ಕೋರಿದರು ಮತ್ತು ಧನ್ಯವಾದಗಳನ್ನು ಅರ್ಪಿಸಿದರು. ಮಹಿಳಾವೇದಿಕೆಯ ಅಧ್ಯಕ್ಷೆಯಾದ ಶ್ರೀಮತಿ ಪರಿಮಳ ಇವರು ಮಹಿಳಾವೇದಿಕೆಯನ್ನು ಬಲಪಡಿಸಲು ಎಲ್ಲರೂ ಸಹಕರಿಸಬೇಕೆಂದು ಕೋರಿದರು. ಆಗಮಿಸಿದ ಎಲ್ಲಾ ಸದಸ್ಯರಿಗೆ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು.

## ಯಕ್ಷಗಾನ ಕಲಾರಂಗ ಪ್ರಶಸ್ತಿ

ನಮ್ಮ ಸಮಾಜದ ಹಿರಿಯರೂ, ಚಿಂತಕರೂ, ವಿದ್ವಾಂಸರೂ, ಸಂಸ್ಕೃತ ಪಂಡಿತರೂ, ರಾಮಾಯಣ – ಮಹಾಭಾರತ ಗ್ರಂಥದ ಪ್ರವಚನಗಾರರೂ, ಯಕ್ಷಗಾನ ಕಲಾವಿದರೂ ಆದ **ಸಾಂತೂರು ಸದಾಶಿವ ರಾವ್**ರವರು **'ಯಕ್ಷಗಾನ ಕಲಾರಂಗ'** ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

## ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಮಹಾಸಭೆ



ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ವಾರ್ಷಿಕ ಮಹಾಸಭೆ ತಾ. 20–12–2020ನೇ ರವಿವಾರದಂದು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನಡೆಯಿತು. ನೂತನ ಸಮಿತಿಯ ಅಧ್ಯಕ್ಷರಾಗಿ ಶ್ರೀ ಎಂ. ದೇವಾನಂದ ಭಟ್ ಬೆಳುವಾಯಿ, ಉಪಾಧ್ಯಕ್ಷರಾಗಿ ಶ್ರೀ ಉದಯ ಬಾರ್ಕೂರು, ಪ್ರಧಾನ ಕಾರ್ಯದರ್ಶಿಯಾಗಿ ಡಾ। ವೈ. ಸುದರ್ಶನ್ ರಾವ್ ಉಡುಪಿ, ಜೊತೆ ಕಾರ್ಯದರ್ಶಿಯಾಗಿ ಶ್ರೀ ಮುರಳೀಧರ್ ಶರ್ಮ ನಿಟ್ಟೆ, ಕೋಶಾಧಿಕಾರಿಯಾಗಿ ಶ್ರೀ ಎನ್. ಎಸ್. ನಟರಾಜ್ ರಾವ್, ಪುತ್ತೂರು ಆಯ್ಕೆಗೊಂಡಿದ್ದಾರೆ.

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬಂಟ್ವಾಳ ವಲಯ, ವಿಟ್ಲ



ದಿನಾಂಕ 13–12–2020ನೇ ಭಾನುವಾರದಂದು ಶ್ರೀಯುತ ಶಿವರಾಮ ರಾವ್ ಬೈರಿಕಟ್ಟೆ ಇವರ ಮನೆಯಲ್ಲಿ ಭಜನಾ ಕಾರ್ಯಕ್ರಮ ಮತ್ತು ಬಂಟ್ವಾಳ ತಾಲೂಕಿನ ಸ್ಥಾನಿಕ ಬ್ರಾಹ್ಮಣ ಸಮಾಜದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡುವ ಕಾರ್ಯಕ್ರಮವನ್ನು ಸಭಾದ ಸಭೆಯೊಂದಿಗೆ ನಡೆಸಲಾಯಿತು.

ಅಧ್ಯಕ್ಷತೆಯನ್ನು ಸಭಾದ ಅಧ್ಯಕ್ಷರಾದ ಶ್ರೀಯುತ ಅನಾರು ಕೃಷ್ಣ ಶರ್ಮರು ವಹಿಸಿದ್ದರು. ವೇದಿಕೆಯಲ್ಲಿ ಕಾರ್ಯಕ್ರಮಕ್ಕೆ ಸ್ಥಳಾವಕಾಶದೊಂದಿಗೆ ಎಲ್ಲಾ ರೀತಿಯ ಸಹಕಾರವನ್ನು ನೀಡಿದ ಮನೆಯ ಯಜಮಾನರಾದ ಶ್ರೀಯುತ ಶಿವರಾಮ ಬೈರಿಕಟ್ಟೆಯವರು ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀಯುತ ಭವಾನಿಶಂಕರ ರಾಯರು, ಉಪಾಧ್ಯಕ್ಷರಾದ ಶ್ರೀಯುತ ದೇವರಾಯರು ಹಾಗೂ ಪ್ರತಿಷ್ಠಾನಕ್ಕೆ ಸ್ಥಳದಾನವನ್ನಿತ್ತ ಶ್ರೀಯುತ ರಮೇಶ ರಾಯರು ಆಸೀನರಾಗಿದ್ದರು. ಕಾರ್ಯಕ್ರಮ ನಿರ್ವಹಣೆಯನ್ನು ಸಭಾದ ಕಾರ್ಯದರ್ಶಿಯವರಾದ ಶ್ರೀ ಸಂತೋಷ್‌ರವರು ನಡೆಸಿಕೊಟ್ಟರು. ವಿದ್ಯಾರ್ಥಿವೇತನ ವಿತರಣೆಯ ನಿರ್ವಹಣೆಯನ್ನು ಸಮಿತಿಯ ನೇತೃತ್ವ ವಹಿಸಿದ್ದ ಶ್ರೀಮತಿ ಶಾರದಾ ಸುಕುಮಾರ್ ರಾವ್ ವಹಿಸಿಕೊಟ್ಟರು.

ದಿಕ್ಸೂಚಿ ಸಂದೇಶವನ್ನು ಶ್ರೀಯುತ ಭವಾನಿಶಂಕರ ರಾವ್ ಮತ್ತು ಡಾ। ಹರೀಶ್ ರಾವ್‌ರವರು ಅಚ್ಚುಕಟ್ಟಾಗಿ ನೆರವೇರಿಸಿದರು. ಸಭಾದ ಅಧ್ಯಕ್ಷರು ಅಧ್ಯಕ್ಷತೆಯ ನೆಲೆಯಲ್ಲಿ ಸಭೆಗೆ ಸಂದೇಶವನ್ನು ಹಾಗೂ ಆಶಯಗಳನ್ನು ತಿಳಿಸಿದರು.

ಶ್ರೀಮತಿ ಅರುಣಾ ಶಿವರಾಮ್ ರಾವ್ ಇವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು. ಆ ಬಳಿಕ ಭೋಜನ ಕಾರ್ಯಕ್ರಮ ಅತಿಥೇಯರ ಸಹೃದಯದ ಸಹಕಾರದೊಂದಿಗೆ ನೆರವೇರುವುದರೊಂದಿಗೆ ದಿನದ ಕಾರ್ಯಕ್ರಮವು ಸಂಪನ್ನಗೊಂಡಿರುತ್ತದೆ.

ಈ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಸಮಾಜ ಬಾಂಧವರೆಲ್ಲರಿಗೂ ಹಾಗೂ ಸ್ಥಳಾವಕಾಶ ಹಾಗೂ ಉಪಚರಿಸಿ ಸಹಕಾರವನ್ನಿತ್ತ ಶ್ರೀಯುತ ಶಿವರಾಮ ರಾವ್ ಅವರ ಕುಟುಂಬ ವರ್ಗದವರಿಗೂ ಅಲ್ಲದೇ ಹೊಸದಾಗಿ ವಿದ್ಯಾರ್ಥಿವೇತನ ದತ್ತಿನಿಧಿ ಸ್ಥಾಪಿಸಿ ಈ ಬಾರಿ ಹೆಚ್ಚು ವಿದ್ಯಾರ್ಥಿವೇತನ ನೀಡಲು ಸಹಕರಿಸಿದ ಡಾ। ಹರೀಶ್ ರಾವ್ ಸಹೋದರರಿಗೂ, ವಿದ್ಯಾರ್ಥಿನಿಧಿಗೆ ಪ್ರತೀ ಬಾರಿಯೂ ದೇಣಿಗೆ ನೀಡಿ ಸಹಕರಿಸುತ್ತಿರುವ ನಮ್ಮ ಸ್ಥಾನಿಕ ಬ್ರಾಹ್ಮಣ ಸಮಾಜ ಬಾಂಧವರೆಲ್ಲರಿಗೂ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬಂಟ್ವಾಳ ವಲಯ – ವಿಟ್ಲ ವತಿಯಿಂದ ಅನಂತಾನಂತ ಧನ್ಯವಾದ ನೀಡಲಾಯಿತು.


**PRAVEEN KUMAR ADYAPADY**
NOTARY & ADVOCATE

MANGALORE OFFICE
JANVI PLAZA, IInd FLOOR
BUNTS HOSTEL, MANGALORE

BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

We undertakes : Civil, Criminal, Motor Vehicles, A.C., D.C. Cases, Land Conversion, Registration etc.

**PREETHIKA AUTOMOBILES**
2493633
9845851573
*Wholesale & Retail Dealers in :*
***2 & 3 WHEELERS, SPARES & ACCESSORIES***
**KARANGALPADY, MANGALORE - 575 003**
*Dealers in :*
Minda Switches, M. K. Products, Swiss Auto Products, Power Coils

## ಪಡುಬಿದ್ರೆ ಸ್ಥಾನಿಕ ಸಭಾ ಪ್ರೋತ್ಸಾಹಧನ ವಿತರಣೆ



ದಿನಾಂಕ 27–12–2020ರಂದು ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತೀ ದೇವಸ್ಥಾನ, ಪಡುಬಿದ್ರೆಯಲ್ಲಿ ಪಡುಬಿದ್ರೆ ಸ್ಥಾನಿಕ ಬ್ರಾಹ್ಮಣ ಸಭಾದ ವತಿಯಿಂದ ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ನಮ್ಮ ಸಮಾಜದ ವಿದ್ಯಾರ್ಥಿಗಳಾದ ಕೃಷ್ಣಪ್ರಸಾದ್, ವೈಷ್ಣವಿ, ವಾಗೀಶ್, ನಮ್ರತಾ, ಅಕ್ಷತಾ, ರಶ್ಮಿ, ಶೃತಿ ಮತ್ತು ಶಿವಪ್ರಸಾದ್ ಒಟ್ಟು 8 ವಿದ್ಯಾರ್ಥಿಗಳಿಗೆ ತಲಾ ರೂ. 10,000ದಂತೆ ವಿದ್ಯಾರ್ಥಿ ಪ್ರೋತ್ಸಾಹಧನವನ್ನು ಸಂಘದ ನಿರ್ದೇಶಕರ ಉಪಸ್ಥಿತಿಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಂ. ಕೆ. ಮೋಹನ್ ರಾವ್ ಅವರ ಅಧ್ಯಕ್ಷತೆಯಲ್ಲಿ ವಿತರಿಸಲಾಯಿತು. ಈ ಸಭೆಯಲ್ಲಿ ಸಂಘದ ಸಂಯೋಜಕರಾದ ಶ್ರೀ ಎಂ. ಕೆ. ದಿವಾಕರ್ ರಾವ್, ಉಪಾಧ್ಯಕ್ಷರಾದ ಶ್ರೀ ರಾಮ ರಾವ್, ಶ್ರೀಮತಿ ಸುಮಿತ್ರ ಸುಬ್ಬ ರಾವ್, ಶ್ರೀ ಲಕ್ಷ್ಮೀಕಾಂತ ರಾವ್, ಯುವವೇದಿಕೆಯ ಅಧ್ಯಕ್ಷರಾದ ಶ್ರೀ ಜನಾರ್ದನ ರಾವ್, ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ ರಾವ್, ಕೋಶಾಧಿಕಾರಿ ಶ್ರೀ ಅರವಿಂದ ರಾವ್, ನಿರ್ದೇಶಕರಾದ ಶ್ರೀ ಉಲ್ಲಾಸ್ ರಾವ್, ಶ್ರೀಮತಿ ಶಶಿಕಲಾ ಚಂದ್ರಶೇಖರ್ ರಾವ್, ಶ್ರೀ ನಯನಾಭಿರಾಮಸ್ವಾಮಿ, ಶ್ರೀಮತಿ ವಿಜಯಲಕ್ಷ್ಮಿ ಶರ್ಮ, ಶ್ರೀ ಜ್ಯೋತೀಂದ್ರನಾಥ್ ರಾವ್, ಶ್ರೀ ಅರುಣ್ ಕುಮಾರ್ ಹಾಗೂ ಮಹಿಳಾ ವೇದಿಕೆಯ ಸಂಚಾಲಕಿ ಶ್ರೀಮತಿ ಸಾವಿತ್ರಿ ಅರವಿಂದ ರಾವ್ ಮತ್ತಿತರರು ಉಪಸ್ಥಿತರಿದ್ದರು. ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ ರಾವ್ ಸ್ವಾಗತಿಸಿ, ಶ್ರೀ ಅರವಿಂದ ರಾವ್ ವಿದ್ಯಾರ್ಥಿಗಳ ಪಟ್ಟಿಯನ್ನು ವಾಚಿಸಿ, ಶ್ರೀ ದಿವಾಕರ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿ ಶ್ರೀ ಅರುಣ್ ರಾವ್ ವಂದಿಸಿ, ಶ್ರೀಮತಿ ರಮ್ಯಾ ರಾವ್ ಕಾರ್ಯಕ್ರಮ ನಿರೂಪಿಸಿದರು.

*ವರದಿ : ಶ್ರೀಮತಿ ರಮ್ಯಾ ಅರುಣ್*

*ಪ್ರಧಾನ ಕಾರ್ಯದರ್ಶಿ, ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರೆ*

## ಶಿವಪಂಚಾಕ್ಷರೀ ಯಾಗ ಸಂಪನ್ನ



ಅಖಿಲ ಸ್ಥಾನಿಕ ಪುರೋಹಿತ ಅರ್ಚಕ ಪರಿಪಾಲನಾ ಸಭಾ, ಮಂಗಳೂರು, ಬೈಂದೂರು ವಲಯದಿಂದ ದಿನಾಂಕ 25–12–2020ರಂದು ತಾಲೂಕಿನ ಹೇರಂಜಾಲು ಶ್ರೀ ಗುಡೇ ಮಹಾಲಿಂಗೇಶ್ವರ ದೇವಳದಲ್ಲಿ ಲೋಕಕಲ್ಯಾಣಕ್ಕಾಗಿ ಶ್ರೀ ಶಿವಪಂಚಾಕ್ಷರೀ ಯಾಗವನ್ನು ಸಂಪನ್ನಗೊಳಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯ ನಮ್ಮ ಸಮಾಜದ ಬಹಳ ಪುರೋಹಿತರು ಬ್ರಹ್ಮಶ್ರೀ ವಾಗೀಶ ತಂತ್ರಿಯವರ ಮಾರ್ಗದರ್ಶನದಲ್ಲಿ ಯಾಗವನ್ನು ಸಂಪನ್ನಗೊಳಿಸಿದರು. ಹಿಂದಿನ ದಿನ ಸಂಜೆ ಅಗ್ನಿಮಥನದಿಂದ ಅಗ್ನಿಯನ್ನು ಉದ್ದೀಪನಗೊಳಿಸಲಾಯಿತು. ಪ್ರಾತಃಕಾಲ 6–30ಕ್ಕೆ ವೇದಬ್ರಹ್ಮ ವಾಗೀಶ ಶಾಸ್ತ್ರಿಯವರ ನೇತೃತ್ವ, ವೇದಬ್ರಹ್ಮ ಕೃಷ್ಣರಾಜ ಭಟ್ ಅವರ ಪ್ರಧಾನ ಆಚಾರ್ಯತ್ವದಲ್ಲಿ, ಶ್ರೀಮತಿ ಭಾಗ್ಯಲಕ್ಷ್ಮಿ ಮತ್ತು ಶ್ರೀ ಶ್ರೀಕಂಠ ಮೇರ್ಟ ದಂಪತಿಗಳ ಪವಿತ್ರಪಾಣಿಯಲ್ಲಿ, 25 ಮಂದಿ ಋತ್ವಿಜರ ಸಹಯೋಗದೊಂದಿಗೆ ಪ್ರಾರಂಭವಾದ ಯಾಗವು 10–00 ಗಂಟೆಗೆ ವಸೋರ್ಧಾರ ಮಹಾಪೂರ್ಣಾಹುತಿಯೊಂದಿಗೆ ಸುಸಂಪನ್ನಗೊಂಡಿತು. ಎಲ್ಲಾ ಋತ್ವಿಜರು ಸಮವಸ್ತ್ರದಲ್ಲಿ, ರುದ್ರಾಕ್ಷಿ ಧಾರಣೆ ಮಾಡಿ ಏಕಸ್ವರದಲ್ಲಿ ಮಂತ್ರಪಠನೆ ಮಾಡುವುದನ್ನು ನೋಡಿ ಭಕ್ತರು ಭಕ್ತಿಪರವಶರಾದರು.

ತದನಂತರ ವೇದಮೂರ್ತಿ ರವಿ ಉಪಾಧ್ಯಾಯ ಹಾಗೂ ವೇದಮೂರ್ತಿ ಸುಬ್ರಹ್ಮಣ್ಯ ಉಪಾಧ್ಯಾಯರ ವೇದಘೋಷದೊಂದಿಗೆ ಪ್ರಾರಂಭವಾದ ಧಾರ್ಮಿಕ ಕಾರ್ಯಕ್ರಮವನ್ನು ಶ್ರೀ ಉಮೇಶ ಶ್ಯಾನುಭೋಗ್ ಉದ್ಘಾಟಿಸಿದರು.

ವೇದಬ್ರಹ್ಮ ಜಗದೀಶ ಉಪಾಧ್ಯಾಯರು ಪ್ರಧಾನ ಉಪನ್ಯಾಸದ ಮೂಲಕ ಎಲ್ಲರನ್ನೂ ಧರ್ಮಜಾಗೃತಗೊಳಿಸಿದರು. ಶೃಂಗೇರಿ ಮಠದ ಉಡುಪಿ ಪ್ರಾಂತೀಯ ಧರ್ಮಾಧಿಕಾರಿಗಳಾದ ಬ್ರಹ್ಮಶ್ರೀ ವಾಗೀಶ ತಂತ್ರಿಗಳು ಯಾಗದ ಬಗ್ಗೆ ತಿಳಿಸಿದರು. ಉಪಾಧ್ಯಕ್ಷರಾದ ವೇದಮೂರ್ತಿ ಜಗದಾಭಿರಾಮಸ್ವಾಮಿ ಪ್ರಾಸ್ತಾವಿಕ ಭಾಷಣಗೈದರು. ಅಧ್ಯಕ್ಷರಾದ ವೇದಮೂರ್ತಿ ಗುರುಪ್ರಸಾದ ಹೆಬ್ಬಾರ್ ಶುಭ ಹಾರೈಸಿದರು.

ದೇವಳದ ಧರ್ಮದರ್ಶಿ ಶ್ರೀ ಪದ್ಮನಾಭ ಮೇರ್ಟರು ಎಲ್ಲರನ್ನು ಅಭಿನಂದಿಸಿದರು. ವೇದಮೂರ್ತಿ ರಾಘವೇಂದ್ರ ಭಟ್ ಬಾರ್ಕೂರು ಇವರು ಸ್ವಾಗತಿಸಿದರು. ಕಾರ್ಯದರ್ಶಿ ವೇದಮೂರ್ತಿ ಚಿದಾನಂದ ಶ್ಯಾನುಭೋಗ್ ವಂದಿಸಿದರು.

ಕಾರ್ಯಕ್ರಮದ ಭೋಜನದ ಪ್ರಾಯೋಜಕತ್ವವನ್ನು ಉದ್ಯಮಿ ಶ್ರೀ ಉಮೇಶ ಶ್ಯಾನುಭೋಗ್ ವಹಿಸಿಕೊಂಡಿದ್ದರು. ಯಾಗದ ದ್ರವ್ಯವನ್ನು ಹಾಗೂ ಎಲ್ಲಾ ಸಾಹಿತ್ಯಗಳನ್ನು ಶ್ರೀ ಶ್ರೀಕಂಠ ಮೇರ್ಟ ಹಾಗೂ ಸಮಸ್ತ ಮೇರ್ಟ ಕುಟುಂಬಸ್ಥರು ವಹಿಸಿಕೊಂಡಿದ್ದರು. ಧರ್ಮದರ್ಶಿ ಶ್ರೀ ಪದ್ಮನಾಭ ಮೇರ್ಟ ಹಾಗೂ ಅವರ ಸಹೋದರರ ಆದರಾತಿಥ್ಯ, ಪರಸ್ಪರ ಸಹಕಾರದಿಂದ ಯಾಗವು ಸಾಂಗವಾಗಿ ನೆರವೇರಿತು.



ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**

**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**

**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

**ರಾಮಾ ಆಟೋಮೊಬೈಲ್ಸ್**




ಮಾರುತಿ ವಾಹನ ತಜ್ಞರು

ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006

ಫೋನ್ : 0824 - 2454355, ಮೊಬೈಲ್ : 9448545702

ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ



**PRAMOD**

**AUTOMOBILES**

30 Years of Service

KARANGALPADY

MANGALORE- 575 003

Ph. : 2493633 (O)
2212723 (R)
M. : 9448260225

Wholesale & Retail Dealers in
2 & 3 WHEELERS SPARES & ACCESSORIES

Prop. : Ln. K. HARSHA KUMAR

ಜ್ಞಾನಾರ್ಜನೆಯ ಗುರಿಯೊಂದಿಗೆ

'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!

ಶುಭಾಶಯಗಳೊಂದಿಗೆ –

**G. K. KOLPE**

House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.




**N. LAXMI PRASAD**

ಕಾರ್ಯಕಾರಿಣಿ ಮಂಡಳಿ ಸದಸ್ಯರು

D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com




## ಜ್ಞಾನ – ನುಡಿ

ದೈಹಿಕ, ಮಾನಸಿಕ ಹಾಗೂ ಅಧ್ಯಾತ್ಮಿಕ ಪ್ರಗತಿಗೆ ಇಂಬು ಕೊಡದ ಶಿಕ್ಷಣ ಅಪೂರ್ಣ.

– **ಡಾ. ಎಸ್. ರಾಧಾಕೃಷ್ಣನ್**

## ಜ್ಞಾನ – ಗಾದೆ

- ದೇವೆರೆನ ಪುದರ್ ಪಂಡ್‌ತ್ ಪಾಯಸ ತಿಂದೆರ್.
- ದೇವೆರೆನ ದಯೆ ಇತ್ತಿನಾಯಗ್ ಬಡಪತ್ ಇದ್ದಿ.
- ದೇವೆರೆನ್ ನಂಬಿನಕ್ಲೆಗ್ ಪೋಡಿಗೆ ಇದ್ದಿ.

## ಜ್ಞಾನ – ನಗೆ

**ಮಗಳು :** ದರ್ಶಿನಿ ಎಂದರೇನು?

**ಅಪ್ಪ :** ಇದು ಒಂದು ತರ ಹೋಟೆಲ್. ತಿನ್ನುವವರು ಬೀದಿಯಲ್ಲಿ ಓಡಾಡುವವರನ್ನೆಲ್ಲಾ ನೋಡಬಹುದು ಹಾಗೆಯೇ ಬೀದಿಯಲ್ಲಿ ಓಡಾಡುವವರೆಲ್ಲಾ ತಿನ್ನುವವರನ್ನು ನೋಡಬಹುದು ಇದೇ ದರ್ಶಿನಿ!

## ಜ್ಞಾನ – ವಿಸ್ಮಯ

ಧೂಳುಹುಳು ಕೇವಲ ಅರ್ಧ ಮಿಲಿಮೀಟರ್ ಅನ್ನೂ ಮುಟ್ಟದ ಗಾತ್ರ ಹೊಂದಿರುತ್ತದೆ. ಪ್ರತಿ ವ್ಯಕ್ತಿಯ ದೇಹದಿಂದ ಪ್ರತೀ ದಿನ ಸರಾಸರಿ 1.5 ಗ್ರಾಂ ಚರ್ಮ ಉದುರುತ್ತದೆ. ಅದು ಒಂದು ದಶಲಕ್ಷ ಧೂಳುಹುಳು ಗಳಿಗೆ ಆಹಾರ!

Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher : Sri Harsha Kumar Kedige, President, Shree Subrahmanya Sabha (R.), Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*